**ಕರ್ನಾಟಕ ಸರ್ಕಾರ**

ಸಂ: ಸಿಆಸುಇ 76 ಹೈಕಕೋ 2018

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 14.01.2020

## ಅಧಿಸೂಚನೆ

ಕರ್ನಾಟಕ ರಾಜ್ಯ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕಾಗಿ ರಾಜ್ಯಪಾಲರ ವಿಶೇಷ ಜವಾಬ್ದಾರಿ) ಆದೇಶ, 2013ರ 2ನೇ ಖಂಡದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಆದೇಶ, 2013ನ್ನು ಮತ್ತಷ್ಟು ತಿದ್ದುಪಡಿಗೊಳಿಸಲು ಕರ್ನಾಟಕ ರಾಜ್ಯಪಾಲರು ಈ ಮೂಲಕ ಮುಂದಿನ ಆದೇಶವನ್ನು ಮಾಡಿರುತ್ತಾರೆ, ಎಂದರೆ:-

## ಆದೇಶ

1. **ಹೆಸರು ಮತ್ತು ಪ್ರಾರಂಭ.**- (1) ಈ ಆದೇಶವನ್ನು ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ಆದೇಶ, 2019 ಎಂದು ಕರೆಯತಕ್ಕದ್ದು.

   (2) ಇದು ಸರ್ಕಾರಿ ರಾಜ್ಯ ಪತ್ರದಲ್ಲಿ ಇದರ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಶೀರ್ಷಿಕೆಗೆ ತಿದ್ದುಪಡಿ.**- ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಆದೇಶ, 2013ರಲ್ಲಿ,-

   (ಎ) ಶಿರೋನಾಮೆಯಲ್ಲಿ ಮತ್ತು ಶೀರ್ಷಿಕೆಯಲ್ಲಿನ 1ನೇ ಖಂಡಿಕೆಯಲ್ಲಿ "ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ" ಎಂಬ ಪದಗಳು ಬರುವ ಎರಡು ಕಡೆಗಳಲ್ಲಿ "ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. **2ನೇ ಖಂಡಿಕೆಗೆ ತಿದ್ದುಪಡಿ.**- **ಸದರಿ ಆದೇಶದ** 2ನೇ ಖಂಡಿಕೆಯಲ್ಲಿನ (ಎ) ಖಂಡದಲ್ಲಿ "ಹೈದರಾಬಾದ್-ಕರ್ನಾಟಕ ಪ್ರದೇಶ" ಎಂಬ ಪದಗಳಿಗೆ "ಕಲ್ಯಾಣ ಕರ್ನಾಟಕ ಪ್ರದೇಶ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**ವಜೂಭಾಯಿ ವಾಲಾ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

V. Akkamahadevi 14/01/2020

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಹೈದರಾಬಾದ್-ಕರ್ನಾಟಕ ವಿಶೇಷ ಕೋಶ)
ಸಿ.ಆ.ಸು.ಇ

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ (ಘಟಕ 2), ಆರ್. ವಿ ಕಾಲೇಜು ಅಂಚೆ, ಮೈಸೂರು ರಸ್ತೆ, ಬೆಂಗಳೂರು-560059 ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV ಎ-ನಲ್ಲಿ ತಕ್ಷಣದ ಪ್ರಕಟಣೆಗಾಗಿ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಬಳಕೆಗಾಗಿ 1000 ಪ್ರತಿಗಳನ್ನು ಸರಬರಾಜು ಮಾಡುವುದಕ್ಕಾಗಿ.

**ಪ್ರತಿ:**
1. ಘನತೆವೆತ್ತ ರಾಷ್ಟ್ರಪತಿಗಳ ಕಾರ್ಯದರ್ಶಿಗಳು, ರಾಷ್ಟ್ರಪತಿ ಭವನ, ನವ ದೆಹಲಿ-110001
2. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.

3. ಕಾರ್ಯದರ್ಶಿಗಳು, ಕೇಂದ್ರ ಗೃಹ ಮಂತ್ರಾಲಯ, ಭಾರತ ಸರ್ಕಾರ, ಎನ್‌ಡಿಸಿಸಿ-2ನೇ ಕಟ್ಟಡ, ಜೈಸಿಂಗ್ ರಸ್ತೆ, ನವ ದೆಹಲಿ - 110001
4. ಕಾರ್ಯದರ್ಶಿಗಳು, ಕಾನೂನು ಮತ್ತು ನ್ಯಾಯ ಇಲಾಖೆ, ಭಾರತ ಸರ್ಕಾರ, ನವ ದೆಹಲಿ - 110001.
5. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದಶಿಗಳು.
6. ಮಾನ್ಯ ಅಧ್ಯಕ್ಷರು, ಸಚಿವ ಸಂಪುಟ ಉಪ ಸಮಿತಿ (ಅನುಚ್ಛೇಧ 371ಜೆ) ಹಾಗೂ ಮಾನ್ಯ ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ.
7. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

************